ಬಹಳಷ್ಟು ಸಮಸ್ಯೆಗಳು ಇವೆ, ಇವರು ದಿನಾಂಕ: 19.06.2009ರಲ್ಲಿ ಜಿಲ್ಲಾಧಿಕಾರಿಗಳಿಗೆ ಒಂದು ಆದೇಶವನ್ನು ಹೊರಡಿಸಿದ್ದಾರೆ. 14ನೇ ತಾರೀಖಿನೊಳಗಡೆ ನೆಮ್ಮದಿ ಕೇಂದ್ರದಲ್ಲಿರತಕ್ಕಂತಹ ಅರ್ಜಿಗಳನ್ನು ಅದರಲ್ಲಿ ಅನರ್ಹರು ಯಾರಿದ್ದಾರೆ, ಮತ್ತು ಲೋಪ ದೋಷಗಳು ಇರುವುದನ್ನು ಕಿತ್ತುಹಾಕಿ ಪಟ್ಟಿ ಮಾಡಿ ಎಂದು ಹೇಳಿದ್ದಾರೆ. ಜನರಲ್ ಆಗಿ ಅಧಿಕಾರಿಗಳು ಏನು ಮಾಡುತ್ತಾರೆಂದರೆ ಅರ್ಹರನ್ನು ತೆಗೆದುಕೊಂಡು ಅದನ್ನು ಸೇರಿಸತಕ್ಕಂತಹ ಕೆಲಸವನ್ನು ಯಾರೂ ಮಾಡುವುದಿಲ್ಲ. ಅನರ್ಹರನ್ನು ಕಿತ್ತುಹಾಕಿದರೆ ಆ ಕೆಲಸವನ್ನು ಮಾಡುತ್ತಾರೆ ಏಕೆಂದರೆ, ಈಗ ಒಂದು ಕೋಟಿ ಚಿಲ್ಲರೆ ಬಿಪಿಎಲ್ ಆಗಿಬಿಟ್ಟಿದೆ. ಅದಕ್ಕೆ ಏನು ಮಾಡುತ್ತಾರೆಂದರೆ, ಎಲ್ಲವನ್ನು ಕಿತ್ತು ಹಾಕುತ್ತಾರೆ, ಚುನಾವಣೆ ಬಂದಾಗ ಒಂದೊಂದು ಜಿಲ್ಲೆಯಲ್ಲಿ ಏನು ಮಾಡಿದ್ದಾರೆಂದರೆ, ಎಲ್ಲಾ ನೆಮ್ಮದಿ ಕೇಂದ್ರಗಳಿಗೆ ಅರ್ಜಿಯನ್ನು ತೆಗೆದುಕೊಳ್ಳಿ ಅಫಿಡವಿಟ್‌ಗಳನ್ನು ಕೊಟ್ಟರು, 2 ತಿಂಗಳು ಆಹಾರವನ್ನು ಕೊಟ್ಟರು. ಈಗಲೂ ಕೊಡುತ್ತಿದ್ದೀರಿ, ಈಗ ನೀವು ಅದನ್ನು ತೆಗೆದುಹಾಕಿದರೆ ಅವರ ಗತಿ ಏನಾಗಬೇಕು? ನೀವು ಎಲ್ಲವನ್ನು ತೆಗೆದುಹಾಕುತ್ತೀರಿ. ಒಂದೊಂದು ಜಿಲ್ಲೆಯಲ್ಲಿ ಒಂದು-ಒಂದೂವರೆ ಲಕ್ಷ ಈ ತರಹ ಬಿಪಿಎಲ್ ಕಾರ್ಡ್‌ನ್ನು ಕೊಟ್ಟಿದ್ದಾರೆ. ಎಷ್ಟು ಬಿಪಿಎಲ್ ಕಾರ್ಡ್ ಎಂದು ಗುರುತಿಸಿದ್ದಾರೆ, ಅದಕ್ಕಿಂತ ಹೆಚ್ಚಾಗಿದೆ. ಬಿಪಿಎಲ್ ಕಾರ್ಡ್ ಎಂದು ಗುರುತಿಸಿರತಕ್ಕಂಥಹ ಕುಟುಂಬಗಳಿಗಿಂತ ಈಗ ಜಾಸ್ತಿಯಾಗಿದೆ. ಇದು ದೊಡ್ಡ ಸಮಸ್ಯೆಯಾಗಿದೆ. ಈ ವಿಷಯದ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಬೇಕಾಗಿದೆ. ತಾವು ಅರ್ಧಗಂಟೆ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು.

**ಅಧ್ಯಕ್ಷರು:** ಅವಕಾಶವನ್ನು ಮಾಡಿಕೊಡುತ್ತೇನೆ. ಮಾನ್ಯ ಪ್ರಕಾಶ್ ಬಾಬಣ್ಣ ಹುಕ್ಕೇರಿಯವರ ಪ್ರಶ್ನೆಯೂ ಕಂದಾಯ ಇಲಾಖೆಗೆ ವರ್ಗಾವಣೆಯಾಗಿದೆ. ಶ್ರೀ ಬಸವರಾಜನ್‌ರವರ ಪ್ರಶ್ನೆ 24(39) ಇದಕ್ಕೆ 15 ದಿವಸಗಳ ಕಾಲಾವಕಾಶವನ್ನು ಕೇಳಿದ್ದಾರೆ. ಮಾನ್ಯ ಬಸವರಾಜನ್‌ರವರೆ ತಮ್ಮ ಪ್ರಶ್ನೆಗೆ next week ಉತ್ತರವನ್ನು ಕೊಡಿಸುತ್ತೇನೆ.

**ಜಮಖಂಡಿಯಲ್ಲಿರುವ ಬಂದಿಖಾನೆ ಸೌಕರ್ಯದ ಬಗ್ಗೆ**

**25(303) ಶ್ರೀ.ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್(ಜಮಖಂಡಿ)**
**ಶ್ರೀ ವಿ. ಉಮೇಶ್ ಕತ್ತಿ(ಮಾನ್ಯ ತೋಟಗಾರಿಕೆ ಹಾಗೂ ಬಂದಿಖಾನೆ ಸಚಿವರು)**

ಅ) ಜಮಖಂಡಿ ಉಪ ಕಾರಾಗೃಹ ಹಳೆ ಕಟ್ಟಡದಿಂದ ಹೊಸ ಕಟ್ಟಡಕ್ಕೆ ಸ್ಥಳಾಂತರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು

ಆ) ಬಂದಿದ್ದಲ್ಲಿ ನಗರದಿಂದ 4 ಕಿ.ಮೀ ದೂರದಲ್ಲಿರುವ ಹೊಸ ಬಂದೀಖಾನೆಗೆ ಕೈದಿಗಳನ್ನು ಸಾಗಿಸಲು ವಾಹನದ ವ್ಯವಸ್ಥೆ ಮಾಡಲಾಗಿದೆಯೆ?

ಬಂದಿಗಳನ್ನು ನ್ಯಾಯಾಲಯಗಳಿಗೆ ಪೋಲೀಸ್ ಬೆಂಗಾವಲಿನಲ್ಲಿ ಹಾಜರುಪಡಿಸುತ್ತಿದ್ದು ಇದಕ್ಕೆ ಪೋಲೀಸ್ ಇಲಾಖೆಯವರೇ ವಾಹನದ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಅದೇ ರೀತಿ ಬಂದಿಗಳನ್ನು ಚಿಕಿತ್ಸೆಗೆ ಆಸ್ಪತ್ರೆಗೆ ಸಹ ತಮ್ಮ ವಾಹನದಲ್ಲಿಯೇ ಪೋಲೀಸರೇ ಕರೆದುಕೊಂಡು ಹೋಗುತ್ತಾರೆ.

ಇ) ಬಂದೀಖಾನೆಯಲ್ಲಿರುವ ನೂರಾರು ಕೈದಿಗಳು ಆರೋಗ್ಯ ರಕ್ಷಣೆಗಾಗಿ ತೆಗೆದುಕೊಂಡ ಕ್ರಮಗಳೇನು?

ಸದರಿ ಕಾರಾಗೃಹದಲ್ಲಿ ಸರಾಸರಿ ಬಂದಿಗಳ ಸ್ಥಂಖ್ಯೆ 32 ಮಾತ್ರ ಇದೆ. ಕೆಪಿಎಂ ನಿಯಮ 69 ರಂತೆ ಸ್ಥಳೀಯ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ವಾರದಲ್ಲಿ ಎರಡು ಬಾರಿ ಉಪ ಕಾರಾಗೃಹಕ್ಕೆ ಭೇಟಿ ನೀಡಿ ಬಂದಿಗಳ ಆರೋಗ್ಯ ತಪಾಸಣೆ ಮಾಡಿ ಚಿಕಿತ್ಸೆ ನೀಡುತ್ತಾರೆ. ಹೆಚ್ಚಿನ ಚಿಕಿತ್ಸೆ ಅಗತ್ಯವಿರುವ ಬಂದಿಗಳನ್ನು ಪೋಲೀಸ್ ಬೆಂಗಾವಲಿನಲ್ಲಿ ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕಳುಹಿಸಲಾಗುತ್ತಿದೆ. ಇನ್ನೂ ಹೆಚ್ಚಿನ ವಿಶೇಷ ಚಿಕಿತ್ಸೆ ಅಗತ್ಯವಿದ್ದಲ್ಲಿ ಬಿಜಾಪುರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗುವುದು.

ಈ) ಕೈದಿಗಳ ಆರೋಗ್ಯ ಕಾಪಾಡಲು ಆಸ್ಪತ್ರೆಯ ಉಪವಿಭಾಗ ಪ್ರಾರಂಭಿಸಲಾಗುವುದೇ?

ಕೇವಲ ಸರಾಸರಿ 32 ಬಂದಿಗಳು ಮಾತ್ರ ದಾಖಲಿರುವುದರಿಂದ, ಇಷ್ಟು ಜನಕ್ಕಾಗಿಯೇ ಪ್ರತ್ಯೇಕ ಆಸ್ಪತ್ರೆ ಉಪವಿಭಾಗ ಪ್ರಾರಂಭಿಸುವುದು ಸಮಂಜಸವಲ್ಲ.

ಉ) ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?

ಉದ್ಭವಿಸುವುದಿಲ್ಲ.

**ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್:** ಮಾನ್ಯ ಅಧ್ಯಕ್ಷರೆ, ಜಮಖಂಡಿಯಲ್ಲಿ ಸಬ್ ಜೈಲ್ ಕಟ್ಟಡವು 4–5 ಕಿಲೋಮೀಟರ್ ಅಂತರ ಇರುವುದರಿಂದ ಅಲ್ಲಿರುವಂತಹ ಖೈದಿಗಳನ್ನು ಕೋರ್ಟಿಗೆ ಮತ್ತು ಆಸ್ಪತ್ರೆಗಳಿಗೆ ಒಯ್ಯಬೇಕಾದರೆ ಅಲ್ಲಿ ವಾಹನದ ಅವಶ್ಯಕತೆ ಇದೆ. ಅಲ್ಲಿ ವಾಹನದ ಅವಶ್ಯಕತೆ ಇಲ್ಲವೆಂದು ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಸರಾಸರಿ 31 ಖೈದಿಗಳು ಎಂದು ಅವರು ಹೇಳಿದ್ದಾರೆ. ಒಂದೊಂದು ಸಾರಿ 100 ಖೈದಿಗಳು ಇರುತ್ತಾರೆ, ಒಂದೊಂದು ಸಾರಿ ಕಡಿಮೆ ಸಂಖ್ಯೆಯ ಖೈದಿಗಳು ಇರುತ್ತಾರೆ. ಒಂದು ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬರುವಂತಹ ಈ ಕಟ್ಟಡಕ್ಕೆ ಖೈದಿಗಳನ್ನು ಸರಿಯಾಗಿ ಕೋರ್ಟಿಗೆ ಮತ್ತು ಪ್ರಸಂಗ ಬಂದಾಗ ಆಸ್ಪತ್ರೆಗೆ ಒಯ್ಯಬೇಕಾದರೆ ಅಲ್ಲಿ ವಾಹನದ ಅವಶ್ಯಕತೆ ಇರುತ್ತದೆ. ಅಲ್ಲಿ ವಾಹನವನ್ನು ಕೊಡುವಂತಹ ವ್ಯವಸ್ಥೆಯೂ ಆಗಬೇಕೆಂಬ ಒಂದು ಪ್ರಶ್ನೆಯನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಅಲ್ಲಿ ಒಬ್ಬ ಮೆಡಿಕಲ್ ಆಫೀಸರ್ ಇದ್ದರೆ, ಅವರು ಆರೋಗ್ಯದ ವಿಚಾರಣೆಯನ್ನು ಮಾಡುವುದಕ್ಕಾಗುತ್ತದೆ. ಅದರೆ ಇಲ್ಲಿ ಮಾನ್ಯಮಂತ್ರಿಗಳು ಕೊಟ್ಟಿರುವ ಉತ್ತರದಲ್ಲಿ ವಾರಕ್ಕೆ ಒಂದು ಬಾರಿ ಅಥವಾ ಎರಡು ಬಾರಿ ಸರ್ಕಾರಿ ಆಸ್ಪತ್ರೆಯಿಂದ ವೈದ್ಯರು ಬರುತ್ತಾರೆಂಬ ಮಾತನ್ನು ಹೇಳಿದ್ದಾರೆ.

ಜಮಖಂಡಿ 100 ಹಾಸಿಗೆಯುಳ್ಳ ಆಸ್ಪತ್ರೆಯಲ್ಲಿ ವೈದ್ಯರ ಸಂಖ್ಯೆ ತುಂಬಾ ಕೊರತೆ ಇದೆ. ಅಲ್ಲಿ ಬರುವಂತಹ ರೋಗಿಗಳಿಗೆ ಔಷಧೋಪಚಾರವನ್ನು ಮಾಡುವುದಕ್ಕಾಗುವುದಿಲ್ಲವೆಂದರೆ, ಅವರು ಜೈಲಿಗೆ ಬರುವುದಕ್ಕಾಗವುದಿಲ್ಲವೆಂಬ ಕಲ್ಪನೆಯನ್ನು ನಾನು ಅವರ ಗಮನಕ್ಕೆ ತರುತ್ತೇನೆ. ಇಲ್ಲಿ ಸುತ್ತಮುತ್ತ ಗುಡ್ಡದ ಪ್ರದೇಶ ಇರುವುದರಿಂದ ಜಮಖಂಡಿ–ಮುಧೋಳ ರಸ್ತೆಯ 4 ಕಿಲೋಮೀಟರ್ ಹತ್ತಿರ ಅರ್ಧ ಕಿಲೋಮೀಟರ್ ಪಕ್ಕದಲ್ಲಿ ಈ ಜೈಲು ಕಟ್ಟಡವಿದೆ. ಅಲ್ಲಿ ಜೈಲು ಕಟ್ಟಡವಿರುವುದರಿಂದ ಅಕಸ್ಮಾತ್ತಾಗಿ ಖೈದಿಗಳನ್ನು ಒಯ್ಯುವಾಗ ಅಥವಾ ತರುವಾಗ ತಪ್ಪಿಸಿಕೊಳ್ಳುವ ಸಾಧ್ಯತೆ ಇದೆ. ಕೆಲವು ದಿವಸಗಳ ಹಿಂದೆ ಒಬ್ಬ ಖೈದಿ ತಪ್ಪಿಸಕೊಂಡು ಹೋಗಿ ನಂತರ ಚಾಣಾಕ್ಷತೆಯಿಂದ ಅಧಿಕಾರಿಯೊಬ್ಬರು ಆ ಖೈದಿಯನ್ನು ಹಿಡಿದರು. ಆದರೆ ಈ ರೀತಿಯಾದರೆ ಅಲ್ಲಿ ಜೈಲನ್ನು ನಡೆಸುವವರಿಗೆ ಬಹಳಷ್ಟು ಸಮಸ್ಯೆಯಾಗುತ್ತದೆ. ಹೀಗಾಗಿ ವಾಹನ ಮತ್ತು ಮೆಡಿಕಲ್ ಆಫೀಸರ್ ಅವಶ್ಯಕತೆ ಇದೆ. ಅದೇರೀತಿ ಅಲ್ಲಿರುವಂಥ ಖಾಲಿಯಿರುವ ಸಿಬ್ಬಂದಿಗಳ ಹುದ್ದೆಗಳನ್ನು ಭರ್ತಿ ಮಾಡಬೇಕು. ಜೈಲರ್ ಪೋಸ್ಟ್‌ಗೆ ಒಬ್ಬ ಅಧಿಕಾರಿ ಬೇಕಾಗಿದೆ, ಅಲ್ಲಿ ಯಾರೋ ಒಬ್ಬ ಹೆಡ್ ಕಾನ್‌ಸ್ಟೇಬಲ್ in charge ಆಗಿ ಕೆಲಸ ಮಾಡುತ್ತಿದ್ದಾರೆ. ಪ್ರಧಾನ ವೀಕ್ಷಕರ ಹುದ್ದೆ ಖಾಲಿ ಇದೆ, FDC,SDC ಹುದ್ದೆಗಳೂ ಕೂಡ ಖಾಲಿ ಇವೆ. ಹಾಗಾಗಿ ಈ ಖಾಲಿಯಿರುವಂಥ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಸಾಧ್ಯತೆ ಇದೆಯೆ ಎಂಬ ಪ್ರಶ್ನೆಯನ್ನು ಸನ್ಮಾನ್ಯ ಮಂತ್ರಿಗಳಿಗೆ ಕೇಳಬಯಸುತ್ತೇನೆ.

**ಶ್ರೀ ಉಮೇಶ್ ವಿ.ಕತ್ತಿ:** ಜಮಖಂಡಿ ತಾಲ್ಲೂಕು ಕೇಂದ್ರದ ಜೈಲು ಊರಿನಲ್ಲಿತ್ತು, ಆ ಊರಿನಲ್ಲಿ ಬಹಳ ದಟ್ಟಣೆಯಾಗುತ್ತದೆಂದು ಹೇಳಿ ಊರಿನಿಂದ ಹೊರಗಡೆ ಜೈಲು ಕಟ್ಟಬೇಕೆಂದು ತೀರ್ಮಾನವಾಗಿ ಹೊಸದಾಗಿ ಜೈಲನ್ನು ಊರಿನಿಂದ 4 ಕಿ.ಮೀ. ದೂರದಲ್ಲಿ ಕಟ್ಟಲಾಗಿದೆ. ಆದರೆ ತಾಲ್ಲೂಕು ಕೇಂದ್ರದಲ್ಲಿ ಇರುವಂಥ ಜೈಲಿನಲ್ಲಿ ಸರಾಸರಿ 32 ಖೈದಿಗಳು ಇರುತ್ತಾರೆ. ಈಗಾಗಲೇ DAR ಪೋಲೀಸ್ ವ್ಯಾನ್‌ಗಳಿಂದ ಅವರನ್ನು ಒಯ್ಯುವಂಥ ಕಾರ್ಯಕ್ರಮಗಳಾಗಲೀ, ಯಾರಾದರೂ ಖೈದಿಗೆ ಅನಾರೋಗ್ಯವುಂಟಾದಾಗ ಜಮಖಂಡಿಯಿಂದ ಲೋಕಲ್ ವೈದ್ಯರು ಬಂದು ನೋಡಿಕೊಂಡು ಹೋಗುವ ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಆದರೆ ವಿಶೇಷವಾಗಿ ಮಾನ್ಯ ಸದಸ್ಯರು ಕೇಳುವುದೇನೆಂದರೆ ವಿಶೇಷವಾಗಿ ಜೈಲಿಗೆ ಒಬ್ಬ ಡಾಕ್ಟರ್ ಅನ್ನು ಕೊಡಬೇಕು. ಆ ಜೈಲಿನಿಂದ ರೋಗಿಗಳನ್ನು ಒಯ್ಯಲಿಕ್ಕೆ ಒಂದು ವಾಹನವನ್ನು ಒದಗಿಸಬೇಕೆಂದು ಕೇಳಿದ್ದಾರೆ, ಆದರೆ ಕಳೆದ ವರ್ಷವೇ ಈ ಜೈಲನ್ನು ಪ್ರಾರಂಭಿಸಿದ್ದೇವೆ. ಅವರು ಹೇಳಿದಂತೆ ಈ ವೈದ್ಯಾಧಿಕಾರಿಗಳು ಆಸ್ಪತ್ರೆಗಳಿಗೆ ಪೂರ್ತಿಯಾಗಿ ಸಿಗುತ್ತಿಲ್ಲ. ಇನ್ನು ಜೈಲುಗಳಿಗೆ ವೈದ್ಯಾಧಿಕಾರಿಗಳು ಬರುವುದು ಬಹಳ ವಿರಳ, ಆದರೂ ಹೊಸದಾಗಿ ಒಬ್ಬ ವೈದ್ಯಾಧಿಕಾರಿಯನ್ನು ನೇಮಿಸುವ ಬಗ್ಗೆಯಾಗಲಿ, ಆ ಜೈಲಿಗೆ ವಾಹನವನ್ನು ಒದಗಿಸುವ ಬಗ್ಗೆಯಾಗಲಿ ಈ ಎರಡೂ ಕಾರ್ಯಕ್ರಮವನ್ನು ಕೆಲವೇ ದಿನಗಳಲ್ಲಿ ಪರಿಶೀಲನೆ ಮಾಡುತ್ತೇವೆ ಸಾಧ್ಯವಾದರೆ

ಅದನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತೇವೆಂದು ತಮ್ಮ ಮುಖೇನ ಸದನಕ್ಕೆ ತಿಳಿಸಬಯಸುತ್ತೇನೆ.

**ಸಭಾಧ್ಯಕ್ಷರು:** ಯು.ಟಿ.ಖಾದರ್‌ರವರೆ ಬೇಡ,

**ಶ್ರೀ ಯು.ಟಿ.ಖಾದರ್:** ಖೈದಿಗಳು ಜೈಲಿನಲ್ಲಿ ಆರಾಮವಾಗಿ ಕುಳಿತುಕೊಂಡು ಮೊಬೈಲ್ ಫೋನಿನ ಮೂಲಕ ಮಾತನಾಡಿ ಮಾಹಿತಿ ಪಡೆಯುವುದು ನಡೆಯುತ್ತದೆ ಇದಕ್ಕೆ ಕಡಿವಾಣ ಹಾಕಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

**ಸಭಾಧ್ಯಕ್ಷರು:** ಆಯಿತು, ಶ್ರೀಕಾಂತ್ ಕೊನೆಯ ಪ್ರಶ್ನೆಯನ್ನು ಕೇಳಿ.

**ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್:** ಸನ್ಮಾನ್ಯ ಮಂತ್ರಿಗಳ ಗಮನಕ್ಕೆ ತರುವ ವಿಷಯವೊಂದಿದೆ, ಜೈಲಿನಲ್ಲಿ ಮಹಿಳಾ ಖೈದಿಗಳ ವಿಭಾಗವಿದ್ದು ಮಹಿಳಾ ಖೈದಿಗಳೂ ಕೂಡ ಆ ಜೈಲಿಗೆ ಬರುತ್ತಾರೆ, ಅಲ್ಲಿ ಒಬ್ಬರಾದರೂ ಮಹಿಳಾ ಕಾನಸ್ಟೇಬಲ್ ಇಲ್ಲ, ಆ ಜೈಲನ್ನು ಹೇಗೆ ನಡೆಸಲಿಕ್ಕೆ ಸಾಧ್ಯ? ತಕ್ಷಣ ಮಹಿಳಾ ಸಿಬ್ಬಂದಿಯನ್ನು ಒದಗಿಸಬಹುದೇ ಎಂಬುದೊಂದು ಪ್ರಶ್ನೆ. ಇನ್ನೊಂದು ಪ್ರಶ್ನೆ ಏನೆಂದರೆ ರಸ್ತೆಯಿಂದ ಅರ್ಧ ಕಿ.ಮೀ ಅಂತರದಲ್ಲಿರುವ ಈ ಕಟ್ಟಡಕ್ಕೆ ಅಲ್ಲಿಯವರೆಗೆ ಬೀದಿ ದೀಪಗಳು ವ್ಯವಸ್ಥೆಯಾಗಬೇಕು ಮತ್ತು ಹೊರಗಡೆ ಒಂದು out post police station ಮಾಡಬೇಕೆನ್ನುವ ಪ್ರಯತ್ನ ಆಗಬೇಕು. ಇದನ್ನು ಮಾಡಬೇಕೆಂದು ಸನ್ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

**ಸಭಾಧ್ಯಕ್ಷರು:** ಇವೆಲ್ಲಾ ಸಣ್ಣ ಸಣ್ಣ ವಿಷಯಗಳು, ಇದನ್ನು ಸದನದಲ್ಲಿ ಕೇಳಿದರೆ ಹೇಗೆ? ಅಲ್ಲಿಯೇ ನಿಂತು ಅವೆಲ್ಲಾ ನೀವು ಮಾಡಿಸಬೇಕು.

**ಶ್ರೀ ಉಮೇರ್ಶ ವಿ.ಕತ್ತಿ:** ಈಗಾಗಲೇ ಬಂಧಿಖಾನೆ ಇಲಾಖೆಯಲ್ಲಿ ಸಿಬ್ಬಂದಿ ಕೊರತೆಯಿರುವುದು ನಿಜ, ಅರ್ಧದಷ್ಟು ಸಿಬ್ಬಂದಿ ಕೊರತೆಯಿಂದ ಇದನ್ನು ಸರಿಯಾಗಿ ನಡೆಸಲಿಕ್ಕಾಗುತ್ತಿಲ್ಲ. ಇತ್ತೀಚೆಗೆ ಹಣಕಾಸು ಇಲಾಕೆಯಿಂದ ಕೆಲವು ಸಿಬ್ಬಂದಿಯನ್ನು ನೇಮಕಾತಿ ಮಾಡಲಿಕ್ಕೆ ಅಪ್ರೂವಲ್ ಕೊಟ್ಟ ಮೇಲೆ ಬರುವ ಎರಡು ತಿಂಗಳಲ್ಲಿ 350 ಜನರನ್ನು ನೇಮಕ ಮಾಡುತ್ತಿದ್ದೇವೆ, ನಂತರ ಅವರು ಹೇಳಿದಂತಹ ಮಹಿಳಾ ಪೊಲೀಸ್ ಸಿಬ್ಬಂದಿಯಾಗಿರಬಹುದು ಅಥವಾ ಆ ಜೈಲಿಗೆ ಬೇಕಾಗಿರುವಂಥ ಸಿಬ್ಬಂದಿಯಾಗಿರಬಹುದು ಕೊಡುವಂಥ ವ್ಯವಸ್ಥೆ ಮಾಡುತ್ತೇವೆ. ಅದರ ಜೊತೆಗೆ ಆ ಪೊಲೀಸ್ ಸ್ಟೇಷನ್ ನಿರ್ಮಾಣ, ಬೀದಿ ದೀಪಗಳ ಬಗ್ಗೆ ಕೇಳುತ್ತಿದ್ದಾರೆ ಸಂಬಂಧಪಟ್ಟ ಜಮಖಂಡಿ ನಗರಸಭೆಗೆ ಇಲಾಖೆಯಿಂದ ವಿನಂತಿ ಮಾಡಿ ವಿದ್ಯುದ್ದೀಪ ಹಾಕಲಿಕ್ಕೆ ಆದೇಶ ಕೊಡುತ್ತೇವೆ ಹಾಗೆ ಅಲ್ಲಿ ಪೊಲೀಸ್ ಸ್ಟೇಷನ್ ಕಟ್ಟಲಿಕ್ಕೆ ಗೃಹ ಸಚಿವರನ್ನು ವಿನಂತಿಸುತ್ತೇವೆ.

**ಹಣ್ಣು ಮತ್ತು ತರಕಾರಿ ಮಾರುಕಟ್ಟೆಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ**

**26(42) ಶ್ರೀ ನಾಡಗೌಡ ವೆಂಕಟರಾವ್(ಸಿಂಧನೂರು)**

**ಶ್ರೀ ಶಿವರಾಜ್ ಎಸ್ ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು)**

ಕ.ವಿ.ಸ-ಕಲಾ-ಬಿ